ಮೂಲ ದಾವಾ ಸಂಖ್ಯೆ. 127/2017 ಪಿ ಡಬ್ಲ್ಯೂ 3

(ದಿನಾಂಕ 31-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

ನಾನು ಜಿ ಕೋಡಿಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ಫ್ರಾಸಾ-2 ದತ್ತಾತ್ರೇಯ ನನ್ನ ಸಹೋದರ. ನನ್ನ ಖುದ್ದು ಊರು ಕೋಡಿಹಳ್ಳಿ ಗ್ರಾಮ ನಾನು ಅಲ್ಲೇ ವಾಸವಾಗಿರುತ್ತೇನೆ. ದಾವಾ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ನಾನು ಶಾಲೆಯನ್ನು ಕಲಿತಿಲ್ಲ. ಅದರ ಕ್ಷೇತ್ರ ನನಗೆ ಗೊತ್ತಿಲ್ಲ. ನನಗೆ ಸಾಕ್ಷಿ ಪ್ರಮಾಣಪತ್ರ ಬರೆಯಲು ನನ್ನ ಸಹೋದರ ಕಲ್ಲೇಪ್ಪ ಮಾಹಿತಿ ನೀಡಿದ್ದಾರೆ ನಾವು ಸುಮಾರು 25 ವರ್ಷದ ಹಿಂದೆ ಮಾರಾಟ ಮಾಡಿದ್ದೇವೆ. ನಾನು ಆಸ್ತಿ ಮಾರಾಟ ಮಾಡಿದ ದಿನದಿಂದ ನಮ್ಮ ಜಮೀನಿನ ಕಡೆ ಹೋಗಿಲ್ಲವೆಂದರೆ ಸರಿ. ಆ ಜಮೀನು ಯಾರು ಸಾಗು ಮಾಡುತ್ತಾರೆನ್ನುವುದು ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿಯ ದಾವಾಸ್ತಿಯನ್ನು ಸಾಗು ಮಾಡುತ್ತಾನೆಂದರೆ ಮಾಡುತ್ತಿರಬಹುದು. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಸಾಗುವಳಿ ಮಾಡಲು ಲಾವಣಿ ರೂಪದಲ್ಲಿ ಕೊಟ್ಟಿದ್ದರು ಅಂತಾ ಬರೆಸಿದ್ದು ಅವರ ಹೆಸರು ಹೇಳಲು ಬರುವುದಿಲ್ಲ. ದಾವಾಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(2 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಆದರೆ 2 ನೇ ಪ್ರತಿವಾದಿಯು ಪ್ರತಿವಾದ ಪತ್ರ ಸಲ್ಲಿಸಿಲ್ಲ ಆದ್ದರಿಂದ ಪಾಟೀ ಸವಾಲು ಏನೂ ಇಲ್ಲವೆಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ